**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ**

**ಸಿಸಿಃನಂಃ 641/2024**

**ಸಿ.ಡಬ್ಲ್ಯೂಃ 1**

**ಪಿ.ಡಬ್ಲೂಃ** 1

**ಸಾಕ್ಷಿದಾರರ ಹೆಸರು ಃ ರಾಜೇಂದ್ರ ಕುಮಾರ್ ಎಂ ವಿ**

**ತಂದೆಯ ಹೆಸರು ಃ ಎಂ ಸಿ ವೆಂಕಟರಾಮ್**

**ವಯಸ್ಸು ಃ 57 ವರ್ಷ**

**ಉದ್ಯೋಗ ಃ ಕೃಷಿ**

**ವಾಸಸ್ಥಳ ಃ ಅರಳೀಕೊಪ್ಪ ಗ್ರಾಮ, ಬಿ ಹೆಚ್ ಕೈಮರ , ನ ರಾ ಪುರ ತಾಲ್ಲೂಕು.**

**ದಿನಾಂಕಃ 1.12.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ನನಗೆ ಚಾಸಾ-2 ರಿಂದ 7 ರವರ ಪರಿಚಯ ಇರುವುದಿಲ್ಲ. ನಾನು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿರುವುದಿಲ್ಲ.

ಬಿ ಹೆಚ್ ಕೈಮರದಲ್ಲಿ ಶಕ್ತಿಗಣಪತಿ ಮತ್ತು ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನವಿದೆ. ನಾನು ಸದರಿ ದೇವಸ್ಥಾನದ ಕಮಿಟಿಯ ಕಾರ್ಯದರ್ಶಿಯಾಗಿದ್ದೇನೆ. ಪ್ರತಿದಿನ ನನ್ನ ತಾಯಿಯವರು ಸದರಿ ದೇವಸ್ಥಾನದ ದೀಪ ಹಚ್ಚಲು ಬೆಳಗ್ಗೆ ಬಾಗಿಲನ್ನು ತೆಗೆಯುತ್ತಾರೆ. ಅದರಂತೆ ದಿನಾಂಕಃ 29.06.2023 ರಂದು ನಮ್ಮ ತಾಯಿಯವರು ಸದರಿ ದೇವಸ್ಥಾನಕ್ಕೆ ಹೋಗಿ ನೋಡಿದಾಗ ದೇವಸ್ಥಾನದ ಬಾಗಿಲಿನ ಬೀಗವನ್ನು ಹೊಡೆದಿರುವುದನ್ನು ಅವರು ನೋಡಿ ತಕ್ಷಣ ನನಗೆ ತಿಳಿಸಿದರು ಆಗ ಸುಮಾರು 7.00 ಗಂಟೆಯಾಗಿತ್ತು. ನಾನು ತಕ್ಷಣ ಸದರಿ ದೇವಸ್ಥಾನಕ್ಕೆ ಹೋಗಿ ಬಾಗಿಲನ್ನು ತೆಗೆದು ನೋಡಲಾಗಿ ದೇವಸ್ಥಾನದ ಒಳಗಡೆ ಇದ್ದ ಕಾಣಿಕೆ ಹುಂಡಿ, ಪೂಜಾ ಸಾಮಾಗ್ರಿಗಳಾದ ತಾಮ್ರದ ಕೊಡಪಾನ, ಜಾಗಟೆ, ಹಿತ್ತಾಳೆ ಹರಿವಾಣ, ಅರಿಶಿಣ ಕುಂಕುಮ ಬಟ್ಟಲು, ಮಂಗಳಾರತಿ ತಟ್ಟೆ ಇತರೆ ಪೂಜಾ ಸಾಮಾಗ್ರಿಗಳು ಕಳ್ಳತನವಾಗಿರುವ ಬಗ್ಗೆ ತಿಳಿಯಿತು. ದೇವಸ್ಥಾನದ ಪಕ್ಕದಲ್ಲಿದ್ದ ಗೋಡನ್ ನ ಬಾಗಿಲಿನ ಬೀಗವನ್ನು ಸಹ ಹೊಡೆದು ಹಾಕಲಾಗಿತ್ತು. ಸದರಿ ಗೋಡನ್ ನಲ್ಲಿ ಅಡುಗೆ

ಸಾಮಾಗ್ರಿಗಳು, ತಾಮ್ರ ಮತ್ತು ಹಿತ್ತಾಳೆಯ ಅಡುಗೆ ಉಪಕರಣಗಳು ಮತ್ತು ಇತರೆ ಪಾತ್ರೆಗಳನ್ನು ಇಟ್ಟಿದ್ದೆವು. ಆ ಪೈಕಿ ತಾಮ್ರ ಮತ್ತು ಹಿತ್ತಾಳೆಯ ಸಾಮಾಗ್ರಿಗಳನ್ನು ಕಳ್ಳತನ ಮಾಡಲಾಗಿರುವ ವಿಚಾರ ನನಗೆ ತಿಳಿಯಿತು ನಾನು ತಕ್ಷಣ ಪೊಲೀಸರಿಗೆ ಪೋನ್ ಮೂಲಕ ವಿಚಾರ ತಿಳಿಸಿರುತ್ತೇನೆ. ಪೊಲೀಸರು ಸುಮಾರು 10.00 ಗಂಟೆಗೆ ಸ್ಥಳಕ್ಕೆ ಆಗಮಿಸಿ ತದನಂತರ ಅಲ್ಲಿಂದ ನಿರ್ಗಮಿಸಿರುತ್ತಾರೆ. ಇದನ್ನು ಹೊರತುಪಡಿಸಿ ನನಗೆ ಈ ಪ್ರಕರಣದ ಬಗ್ಗೆ ಬೇರೆ ಯಾವುದೇ ವಿಚಾರ ತಿಳಿದಿರುವುದಿಲ್ಲ.

ಈಗ ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ದೂರಾಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-1, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ನಿಪಿ-1 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಅದು ಸ್ಥಳ ಮಹಜರ್ ಆಗಿದ್ದು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು , ಸದರಿ ದಾಖಲೆಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-2 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ರ ಸಮಯದಲ್ಲಿ ತೆಗೆಯಲಾದ 6 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ಪೋಟೋಗಳನ್ನು ಪೊಲೀಸರು ಯಾವ ಕಾರಣಕ್ಕಾಗಿ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-2 ರಂತೆ ದಾಖಲು ಮಾಡಿಕೊಳ್ಳುವಾಗ ಅಲ್ಲಿ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ಸ್ಥಳದಲ್ಲಿ ಕಳ್ಳತನ ಆಗಿರುವ ಜಾಗ ಎಂದು ಆರೋಪಿತರು ತೋರಿಸಿದಂತೆ ಸದರಿ ಸ್ಥಳದಲ್ಲಿ ಪೊಲೀಸರು ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಸ್ಥಳ ಮಹಜರ್ ಕ್ರಮ ಜರುಗಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆದರೆ ಸದರಿ ದಾಖಲೆಯಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುವುದಾಗಿ ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ-

9, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-9 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 29.07.2023 ರಂದು ಬೆಳಗ್ಗೆ 11 ಗಂಟೆಗೆ ನಾನು ನಿಪಿ-1 ರಂತೆ ಪೊಲೀಸ್ ಠಾಣೆಗೆ ಹಾಜರಾಗಿ ಗಣಕೀಕೃತ ದೂರನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿದಂತೆ ಸದರಿ ದೇವಸ್ಥಾನಲ್ಲಿದ್ದ ಕಾಣಿಕೆ ಹುಂಡಿ ಬೀಗ ಹೊಡೆದು ಅದರಲ್ಲಿದ್ದ ಅಂದಾಜು ಸುಮಾರು ರೂ. 6000/- ದೇವಸ್ಥಾನದ ಬೀರುವಿನಲ್ಲಿಟ್ಟಿದ್ದ 1 ಹಿತ್ತಾಳೆಯ ತೇರು ಆರತಿ, 1 ಹಿತ್ತಾಳೆಯ ಚೈನಿನ ದೀಪದ ಬಟ್ಟಲು, 4 ಹಿತ್ತಾಳೆಯ ಹರಿವಾಣಗಳು, ದೇವಸ್ಥಾನದ ಗರ್ಭಗುಡಿಯಲ್ಲಿದ್ದ ತಾಮ್ರದ 3 ಕೊಡಪಾನ, ಇತರೆ ಪೂಜಾ ಸಾಮಾಗ್ರಿಗಳಾದ 1 ಹಿತ್ತಾಳೆಯ ಆರತಿ, 1 ಹಿತ್ತಾಳೆಯ ದೀಪ, 1 ಹಿತ್ತಾಳೆಯ ಬಟ್ಟಲು, 1 ತಾಮ್ರದ ಕಳಸದ ಚೊಂಬು ಮತ್ತು ಗರ್ಭಗುಡಿಯ ಹೊರಭಾಗದಲ್ಲಿದ್ದ 3 ಕಂಚಿನ ಜಾಗಟೆಗಳನ್ನು ಕಳ್ಳತನವಾಗಿರುವ ವಿಚಾರವನ್ನು ನಮೂದು ಮಾಡಿರುತ್ತೇನೆಂದರೆ ಸರಿಯಲ್ಲ. ಸದರಿ ಕಳ್ಳತನವಾದ ವಸ್ತುಗಳ ಮೌಲ್ಯ ಅಂದಾಜು ರೂ. 25,000/- ಗಳಾಗಿರುತ್ತವೆ ಎಂದು ನಮೂದು ಮಾಡಿರುತ್ತೇವೆಂದರೆ ಸರಿಯಲ್ಲ.

ನಂತರ ದಿನಾಂಕಃ 29.07.2023 ರಂದು ಚಾಸಾ-2 ಮತ್ತು 3 ರವರ ಸಮಕ್ಷಮ ಕಳ್ಳತನವಾದ ಸ್ಥಳವನ್ನು ನಾನು ತೋರಿಸಿದಂತೆ ಮ 12.00 ರಿಂದ 1.00 ಗಂಟೆಯವರೆಗೆ ಸ್ಥಳದಲ್ಲಿಯೇ ಸ್ಥಳ ಪಂಚನಾಮೆಯನ್ನು ದಾಖಲು ಮಾಡಿರುತ್ತಾರೆಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ-3 ರಿಂದ 8 ಭಾವಚಿತ್ರಗಳನ್ನು ತೆಗೆದುಕೊಳ್ಳಲಾಯಿತು ಎಂದರೆ ಸರಿಯಲ್ಲ.

ನಂತರ ದಿನಾಂಕಃ 06.08.2024 ರಂದು ಆರೋಪಿತರ ಸಮಕ್ಷಮ ಮತ್ತು ಚಾಸಾ-4 ಮತ್ತು 5 ರವರ ಸಮಕ್ಷಮ ಆರೋಪಿತರು ತೋರಿಸಿದಂತೆ ದೇವಸ್ಥಾನದಲ್ಲಿ ಕಳ್ಳತನವಾದ

ಸ್ಥಳವನ್ನು ಸ್ಥಳ ಪಂಚನಾಮೆಯನ್ನು ಸಂಜೆ 6.30 ರಿಂದ 7.00 ಗಂಟೆಯವರೆಗೆ ದಾಖಲು ಮಾಡಿಕೊಂಡರು ಎಂದರೆ ಸರಿಯಲ್ಲ. ನನಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 07.08.2024 ರಂದು ನನ್ನ ಮುಂದುವರೆದ ಹೇಳಿಕೆಯನ್ನು ಠಾಣೆಯಲ್ಲಿ ನೀಡಿರುತ್ತೇನೆಂದರೆ ಸರಿಯಲ್ಲ. ಈಗ ಸಾಕ್ಷಿಗೆ ಹೇಳಿಕೆಯ ಭಾಗವಾದ " ದಿನಾಂಕಃ 06.08.2024 ರಂದು ಸಂಜೆ 6.00 ಗಂಟೆ ಸಮಯದಲ್ಲಿ ........... ಮುಂದಕ್ಕೆ ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ." ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-10 ಎಂದು ಗುರುತಿಸಲಾಯಿತು. ನನಗೆ ಸದರಿ ಕಳ್ಳತನವನ್ನು ಆರೋಪಿತರೇ ಮಾಡಿರುವುದಾಗಿ ತಿಳಿದಿದ್ದರೂ ಸಹ ನಾನು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡಿರುವುದರಿಂದ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಪಾಟೀ ಸವಾಲು ಆರೋಪಿತರ ಪರ ಶ್ರೀ. ಎಂ ಸಿ ಮತ್ತು ಹೆಚ್ ಎಂ ಬಿ ವಕೀಲರಿಂದಃಃ ಇಲ್ಲಾಃಃ**

**ಃಃ ಮರು ವಿಚಾರಣೆ ಇಲ್ಲಃಃ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**